ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 43/2022

ಸಿ.ಡಬ್ಲ್ಯೂ -03
ಪಿ.ಡಬ್ಲ್ಯೂ-04

ಸಾಕ್ಷಿದಾರನ ಹೆಸರು :- ಗಂಗಮ್ಮಾ
ಗಂಡನ ಹೆಸರು :- ಚೌಡಯ್ಯ
ವಯಸ್ಸು :- 70 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ರಾಜಪ್ಪನದೊಡ್ಡಿ

**<u>ಸಾಕ್ಷಿಗೆ ದಿಃ 11.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಚಾಸಾ 1 ಮತ್ತು 2 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ಚಾಸಾ 1 ನನ್ನ ಅಳಿಯ ಆಗಬೇಕು. ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.</u>**

ದಿಃ 18.07.2020 ರಂದು ಸಂಜೆ 7.15 ಗಂಟೆ ಸಮಯದಲ್ಲಿ ನಾನು ನಮ್ಮ ಮನೆ ಯ ಹತ್ತಿರ ಇರುವಾಗ ಚಾಸಾ 1 ಮತ್ತು 2 ನಮ್ಮ ಮನೆಯ ಮುಂದೆ ಇರುವ ನರಸಿಂಹಯ್ಯ ಅವರು ಮನೆಯಲ್ಲಿರುವಾಗ ಆರೋಪಿತರು ಅಲ್ಲಿಗೆ ಬಂದು ನರಸಿಂಹಯ್ಯ ಅವರ ಮನೆಯ ಮುಂದೆ ಹಾಕಿರುವ ಸಿಮೆಂಟ್ ವಿಚಾರವಾಗಿ ನರಸಿಂಹಯ್ಯ ಅವರ ಮನೆಯಲ್ಲಿದ್ದ ಚಾಸಾ 1 ಅವರನ್ನು ಅವಾಚ್ಯ ಶಬ್ದಗಳಿಂದ ಬೈದು ಆರೋಪಿ 1 ಏಕಾಏಕಿ ಮಚ್ಚಿನಿಂದ ಚಾಸಾ 1 ಅವರ

ತಲೆಯ ಬಲಬಾಗಕ್ಕೆ ಮತ್ತು ಬಲಗೈನ ಬುಜಕ್ಕೆ ಹೊಡೆದು ರಕ್ತ ಗಾಯ ಪಡಿಸಿದ್ದು ಆರೋಪಿ 3 ದೊಣ್ಣೆಯಿಂದ ಬೆನ್ನಿಗೆ ಮತ್ತು ಎಡಬುಜಕ್ಕೆ ಹೊಡೆದು ನೊವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2 ಜಗಳ ಬಿಡಿಸಿಕೊಳ್ಳಲು ಬಂದಾಗ ಆರೋಪಿ 2 ತನ್ನ ಕೈಯಿಂದ ಅವರ ಕಪಾಳಕ್ಕೆ ಹೊಡೆದು ನೋವುಂಟು ಮಾಡಿದ್ದು ನಾನು ಬಿಡಿಸಿಕೊಳ್ಳಲು ಹೋದಾಗ ಆರೋಪಿ 10 ನನ್ನ ಕೈಗಳಿಂದ ನನ್ನ ಮುಖಕ್ಕೆ ಹೊಡೆದು ಬೆನ್ನಿಗೆ ಗುದ್ದಿ ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಉಳಿದ ಆರೋಪಿತರು ಮನೆಯ ಮುಂದಿನ ಒತಾರದಿಂದ ಮನೆಯ ಬಾಗಿಲನ್ನು ಕಲ್ಲಿನಿಂದ ಹೊಡೆದು ಜಕಂ ಗೋಳಿಸಿ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಕಿಡಕಿ ಗಾಜುಗಳನ್ನು ಹೊಡೆದು ಹಾಕಿ 25-30 ಸಾವಿರ ನಷ್ಟ ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ 4 ಮತ್ತು 5 ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 1 ಚಾಸಾ 1 ಅವರನ್ನು ಕುರಿತು ಲೇ ನನ್ನ ಮಗನೇ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಒಂದು ಗತಿ ಕಾಣಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ದಿಃ 23.07.2020 ರಂದು ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ 1 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.